THE NEW INDIAN EXPRESS
MANGALURU • FRIDAY • NOVEMBER 23, 2018 • ₹6.00 • PAGES 16 • CITY EDITION



# SAHYADRI SELECTED TO GET MHRD'S INNOVATION CELL

**EXPRESS NEWS SERVICE**
@ Mangaluru

SAHYADRI College of Engineering & Management (SCEM), Mangaluru, has been selected for establishing Institute Innovation Council (IIC) as per the norms and directives of Innovation Cell, Ministry of Human Resource Development (MHRD), Government of India.

Dr Manjappa Sarathi, Director R&D and President of IIC, SCEM and Dr Anush Bekal, Associate Professor, ECE and Convener of IIC; Sahyadri received the institution certificate from Dr M P Poonia, Vice-chairman of All India Council for Technical Education at the AICTE Headquarters, during the launch of 'Institution's Innovation Council (IIC) programme attended by union HRD Minister Prakash Javadekar in New Delhi recently.

MHRD has established 'MHRD's Innovation Cell (MIC)' to systematically foster the culture of Innovation amongst all HEIs across the country. MIC with the mandate to work closely with all HEIs to encourage the creative energy of student population to work on new ideas and innovation and promote them to create start-ups and entrepreneurial ventures. MIC will focus on creating complete ecosystem which will foster the culture of innovation across all educational institutions from idea generation to pre-incubation, incubation and graduating from the incubator as successful start-ups. MIC will also work on designing ranking system to identify institutions in the forefront of innovation. It will actively engage various central and state agencies to ensure that a dedicated budget is allocated for innovation-related activities.

ಸಂಪುಟ Volume 60 | ಸಂಚಿಕೆ Issue 298 | ಪುಟ Pages 12+4
epaper.samyukthakarnataka.com
ಮಂಗಳೂರು Mangaluru | ಹುಬ್ಬಳ್ಳಿ Hubballi | ಬೆಂಗಳೂರು Bengaluru | ಕಲಬುರಗಿ Kalaburagi | ದಾವಣಗೆರೆ Davanagere
ಸಂಯುಕ್ತ ಕರ್ನಾಟಕ
ಕನ್ನಡಿಗರ ಸಾಕ್ಷಿಪ್ರಜ್ಞೆ ಎಂಟು ದಶಕದ ನಂಟು
samyukthakarnataka
ಶುಕ್ರವಾರ Friday | ನವೆಂಬರ್ 23-2018 November | ₹ 6-00



9ನೇ ವರ್ಷದ ವಿವಾಹ ವಾರ್ಷಿಕೋತ್ಸವ ಸಂಭ್ರಮದಲ್ಲಿ ಖ್ಯಾತ ನಟಿ ಶಿಲ್ಪಾಶೆಟ್ಟಿ..
'ಮೀಟೂ' ಹೇಳಿಕೊಳ್ಳಲೇಬೇಕಾದ ಸಾಕಷ್ಟು ಸಂಗತಿಗಳಿವೆ ಎಂದಿರುವ ನಟಿ ಕರೀನಾಕಪೂರ್..



ಅಡ್ಯಾರ್‌ನ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಆಂಡ್ ಮ್ಯಾನೇಜ್‌ಮೆಂಟ್ (SCEM), ಮಂಗಳೂರಿನ ಇನ್ಸ್ಟಿಟ್ಯೂಟ್ ಇನ್ನೋವೇಷನ್ ಕೌನ್ಸಿಲ್ (ಐಐಸಿ) ಸ್ಥಾಪಿಸಲು ಭಾರತದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (MHRD) ನಿರ್ದೇಶನಗಳ ಪ್ರಕಾರ ಆಯ್ಕೆ ಮಾಡಲಾಗಿದೆ.

www.varthabharati.in
ಜನದನಿಯ ಸಾರಥಿ
epaper.varthabharati.in

# ವಾರ್ತಾ ಭಾರತಿ

ಸತ್ಯ ಎಲ್ಲರಿಗೆ
◆ ಮಂಗಳೂರು ◆ ಬೆಂಗಳೂರು ◆ ಶಿವಮೊಗ್ಗ
23 ನವೆಂಬರ್ 2018
ಶುಕ್ರವಾರ
VARTHABHARATHI KANNADA DAILY
/ Varthabharati
REGD.NO: MNG/958/2016-18 RNI N0. KAR KAN/2003/11378
ಸಂಪುಟ 16 ● ಸಂಚಿಕೆ 83 ● ಮಂಗಳೂರು ● ಪುಟ 1

CENTRAL LIBRARY

HOME
Furniture | Interio
The Biggest Furni
NH 66, Near K
Mob.: 988614

## ಇನ್ನೋವೇಶನ್ ಸೆಲ್ ಸ್ಥಾಪನೆಗೆ ಸಹ್ಯಾದ್ರಿ ಆಯ್ಕೆ

ಮಂಗಳೂರು, ನ.22: ಎಂಎಚ್‌ಆರ್‌ಡಿ (ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ) ಯಿಂದ ಇನ್ನೋವೇಶನ್ ಸೆಲ್ ಸ್ಥಾಪಿಸಲು ಮಂಗಳೂರಿನ ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್ (ಎಸ್‌ಸಿಇಎಂ) ಕಾಲೇಜು ಆಯ್ಕೆಗೊಂಡಿದೆ.

ದಿಲ್ಲಿಯ ಆಲ್ ಇಂಡಿಯಾ ಕೌನ್ಸಿಲ್ ಫಾರ್ ಟೆಕ್ನಿಕಲ್ ಎಜುಕೇಶನ್ (ಎಐಸಿಟಿಇ) ಪ್ರಧಾನ ಕಚೇರಿಯಲ್ಲಿ ನ.21ರಂದು ಇನ್ನೋವೇಶನ್ ಸೆಲ್ ಅಡಿಯಲ್ಲಿ ಇನ್‌ಸ್ಟಿಟ್ಯೂಷನ್ ಇನ್ನೋವೇಶನ್ ಕೌನ್ಸಿಲ್ (ಐಐಸಿ) ಕಾರ್ಯಕ್ರಮಕ್ಕೆ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ಪ್ರಕಾಶ್ ಜಾವಡೇಕರ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಪ್ರಮುಖ ಸಂಶೋಧನಾ ಕೇಂದ್ರಗಳು ಮತ್ತು ಅವುಗಳ ಸಂಶೋಧನೆಯಿಂದ ಜಾಗತಿಕ ನಾವೀನ್ಯದ ಶ್ರೇಯಾಂಕದಲ್ಲಿ ಉನ್ನತ ಸ್ಥಾನವನ್ನು ಪಡೆದುಕೊಂಡಿವೆ. ಈಗ ಭಾರತೀಯ ವಿಶ್ವವಿದ್ಯಾನಿಲಯಗಳು ಐಐಸಿ ಕಾರ್ಯಕ್ರಮದ ಮೂಲಕ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸುತ್ತಿವೆ. ನಾವು ಈ ಉಪಕ್ರಮದಲ್ಲಿ ನಾವೀನ್ಯತೆಗೆ ಉತ್ತಮ ಅಭ್ಯಾಸಗಳನ್ನು ಉತ್ತೇಜಿಸುವ ಮೂಲಕ ಉನ್ನತ ಶಿಕ್ಷಣದಲ್ಲಿ ಶೈಕ್ಷಣಿಕ ಪ್ರಗತಿ ಸಾಧಿಸಬಹುದು ಎಂದು ಹೇಳಿದರು.



ಇನ್ನೋವೇಶನ್ ಸೆಲ್ ಅಟಲ್ ರ‍್ಯಾಂಕಿಂಗ್ ಆಫ್ ಇನ್‌ಸ್ಟಿಟ್ಯೂಶನ್ಸ್ ಆನ್ ಇನ್ನೊವೇಶನ್ ಸಾಧನೆ (ಎಆರ್‌ಐಐಎ), ಸ್ಟಾರ್ಟ್ ಇಂಡಿಯಾ ಹ್ಯಾಕಥಾನ್ (ಎಸ್‌ಐಎಚ್)- ನಂತಹ ಅನೇಕ ಉಪಕ್ರಮಗಳನ್ನು ಕೈಗೊಂಡಿದೆ ಎಂದರು.

ಪ್ರಮಾಣಪತ್ರವನ್ನು ಎಐಸಿಟಿಇಯ ಉಪಾಧ್ಯಕ್ಷ ಡಾ.ಎಂ.ಪಿ. ಪೂನಿಯಾ ಅವರಿಂದ ಡಾ.ಮಂಜಪ್ಪ ಸಾರಥಿ, ಸಹ್ಯಾದ್ರಿ ಐಐಸಿ ಅಧ್ಯಕ್ಷ ಮತ್ತು ಸಹ್ಯಾದ್ರಿ ಐಐಸಿಯ ಎಸೋಸಿಯೇಟ್ ಪ್ರಾಧ್ಯಾಪಕ ಡಾ.ಅನುಶ್ ಬೇಕಲ್ ಸ್ವೀಕರಿಸಿದರು.

ಎಂಎಚ್‌ಆರ್‌ಡಿ ಕಾರ್ಯದರ್ಶಿ ಆರ್. ಸುಬ್ರಹ್ಮಣ್ಯಂ, ಎಐಸಿಟಿಇ ಅಧ್ಯಕ್ಷ ಪ್ರೊ.ಅನಿಲ್ ಸಹಸ್ರಬುದ್ದೇ, ಜಂಟಿ ಕಾರ್ಯದರ್ಶಿ ಡಾ.ಎಸ್.ಸರವನ ಕುಮಾರ್, ಯುಜಿಸಿ ಉಪಾಧ್ಯಕ್ಷ ಪ್ರೊ.ಭೂಷಣ್ ಪಟ್ವರ್ಧನ್, ಎಂಐಸಿ ಸಿಐಒ ಡಾ. ಅಭಯ್ ಜೆರೆ, ಕೇಂದ್ರ ಸರಕಾರಿ ಏಜೆನ್ಸಿಗಳ ಹಿರಿಯ ಅಧಿಕಾರಿಗಳು ಮತ್ತು ದೇಶಾದ್ಯಂತ ವಿಶ್ವವಿದ್ಯಾನಿಲಯ ಹಾಗೂ ಉನ್ನತ ಶೈಕ್ಷಣಿಕ ಸಂಸ್ಥೆಗಳಿಂದ 800ಕ್ಕಿಂತ ಹೆಚ್ಚು ಪ್ರತಿನಿಧಿಗಳು ಸಮಾರಂಭದಲ್ಲಿ ಭಾಗವಹಿಸಿದ್ದರು.